**ಅಸಲು ದಾವಾ ಸಂಖ್ಯೆ: 19/2016** ಡಿ.ಡಬ್ಲ್ಯೂ:- 1

ದಿನಾಂಕಃ **29-08-2023** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು:- ವಾದಿ ಪರ ವಕೀಲರಿಂದ:-**

ವಾದಿ ನನ್ನ ಮಾವನ ತಮ್ಮ, 1 ನೇ ಪ್ರತಿವಾದ ಮಾತ್ರ ನನಗೆ ದಾವೆ ನಡೆಸಲು ಅಧಿಕಾರ ಪತ್ರವನ್ನು ಬರೆದುಕೊಟ್ಟಿರುತ್ತಾರೆ ನಾನು ಶಿವಮೊಗ್ಗದಲ್ಲಿ ವಾಸವಾಗಿದ್ದೇನೆ. ವಾದಿ ಮತ್ತು ಪ್ರತಿವಾದಿಗಳು ನನಗೆ ಸುಮಾರು 30 ವರ್ಷಗಳಿಂದ ಪರಿಚಯವಿದ್ದಾರೆ. ಈ ಪ್ರಕರಣವನ್ನು ಹೊರತುಪಡಿಸಿ ಇತರೆ ಪ್ರಕರಣಗಳಲ್ಲಿ ನಾನು ನ್ಯಾಯಾಲಯಕ್ಕೆ ಹಾಜರಾಗುತ್ತಿರುವುದಿಲ್ಲ. ಜಿ.ಪಿ.ಎ ದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇದೆ. 1 ನೇ ಪ್ರತಿವಾದಿಯು ನಿಡಿ-2 ದಾಖಲೆಯನ್ನು ಬರೆದುಕೊಟ್ಟಿರುತ್ತಾರೆ. ನಿಡಿ-2 ದಾಖಲೆಯಲ್ಲಿ ಈ ದಾವೆಯ ಸಂಖ್ಯೆಯನ್ನು ನಮೂದು ಮಾಡಿರುವುದಿಲ್ಲ. ದಾವಾ ಸ್ವತ್ತಿನ ವಿವರಗಳನ್ನು ನಿಡಿ-2 ರಲ್ಲಿ ನಮೂದಿಸಿರುವುದಿಲ್ಲ. ನಿಡಿ-2 ಈ ದಾವೆಗೆ ಸಂಬಂಧ ಪಟ್ಟಿಲ್ಲದೇ ಇರುವುದರಿಂದ 1 ನೇ ಪ್ರತಿವಾದಿಯ ಪರವಾಗಿ ಸಾಕ್ಷ್ಯ ನುಡಿಯಲು ಯಾವುದೇ ಅಧಿಕಾರ ಇರುವುದಿಲ್ಲ, ಎಂದರೆ ಸರಿಯಲ್ಲ.

ವಾದಿಯು ನಿವೇಶನ ಸಂಖ್ಯೆ 12, ವಿಸ್ತೀರ್ಣ 45X120 ಸ್ವತ್ತಿಗೆ ಸಂಬಂಧಿಸಿದಂತೆ ದಾವೆಯನ್ನು ಹೂಡಿರುತ್ತಾರೆ. ವಾದಿಯು ಯಾವ ಸ್ವತ್ತಿಗೆ ಹಾಗೂ ಎಷ್ಟು ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ದಾವೆಯನ್ನು ಹೂಡಿದ್ದಾರೆ ಎಂಬ ಬಗ್ಗೆ ನಾನು ವಕೀಲರಿಂದ ಕೇಳಿ ತಿಳಿದುಕೊಂಡಿರುತ್ತೇನೆ. ವಾದಿಯು ಸೈಟ್ ನಂ.12 ಮತ್ತು 13 ರ ಒಟ್ಟು ವಿಸ್ತೀರ್ಣ 120X90 ಅಡಿ ಜಾಗಕ್ಕೆ ಸಂಬಂಧಿಸಿದಂತೆ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನ ಪೂರ್ವಕ್ಕೆ ಗಿರಿಯಪ್ಪನ ಜಾಗ, ಪಶ್ಚಿಮಕ್ಕೆ ಹನುಮಂತಪ್ಪ ಜಾಗ, ಉತ್ತರ ಮತ್ತು ದಕ್ಷಿಣಕ್ಕೆ ರಸ್ತೆ ಇದೆ ಎಂದರೆ

ಸರಿ. ವಾದಿಯು ದಾವಾ ಸ್ವತ್ತಿನಲ್ಲಿ ಭಾಗ ಮಾಡಿಕೊಡಿ ಎಂದು ಕೇಳಿ ದಾವೆಯನ್ನು ಹೂಡಿರುತ್ತಾರೆ. ವಾದಿಯ ಕುಟುಂಬದ ಬಗ್ಗೆ ನನಗೆ ಪೂರ್ಣ ಮಾಹಿತಿ ಇದೆ. ಗಿರಿಯಪ್ಪ ಬಿನ್ ಹಾಲಪ್ಪ ರವರು ನನಗೆ ಗೊತ್ತು. ಅವರ ಪತ್ನಿ ಗಂಗಮ್ಮ. ಅವರಿಬ್ಬರು ಸಹ ಈಗ ಮೃತರಾಗಿರುತ್ತಾರೆ. ಅವರಿಗೆ ರುದ್ರಪ್ಪ ,ಲಕ್ಷ್ಮಮ್ಮ, ಹಾಲಪ್ಪ , ನಾಗೇಂದ್ರಪ್ಪ ಮತ್ತು ಹನುಮಮ್ಮ ಎಂಬ 5 ಜನ ಮಕ್ಕಳು ಎಂದರೆ ಸರಿ. ರುದ್ರಪ್ಪನ ಹೆಂಡತಿ 1 ನೇ ಪ್ರತಿವಾದಿ. 2 ನೇ ಪ್ರತಿವಾದಿ ಹಾಲಪ್ಪನ ಪತ್ನಿ.

ಮುಂದುವರೆದ ಪಾಟೀಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಹೊನ್ನಾಳಿ.**

<u>ಅಸಲು ದಾವಾ ಸಂಖ್ಯೆ 104/2015</u>                ಡಿ.ಡಬ್ಲ್ಯೂ:- 1

ದಿನಾಂಕಃ **28.06.2022** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-</u>

<u>ದಾವಾ ಸ್ವತ್ತಿನ ಮನೆಯಲ್ಲಿ</u>

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

**ಪ್ರಧಾನ** ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., **ಹೊನ್ನಾಳಿ.**